ಸೃಜನಿ

SRUJANI: Indian Journal of Innovative Research and Development (SIJIRD)
Volume-4 Issue 5, November-December 2025, Pp. 7-9
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಕನ್ನಡ ಸಾಹಿತ್ಯದ ಮೇಲೆ ಧಾರ್ಮಿಕ ಪ್ರೇರಣೆಗಳು

**ಡಾ. ಶ್ರೀನಿವಾಸ ಟಿ**
ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ, ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜು, ಮೈಸೂರು

***Abstract:***
*ಕನ್ನಡ ಸಾಹಿತ್ಯದ ಮೇಲೆ ಧಾರ್ಮಿಕ ಪ್ರಭಾವವು ಗಣನೀಯವಾಗಿದ್ದು, ಅದು ಸಾಹಿತ್ಯದ ವಿಷಯಗಳು, ಕಲಾ ಪ್ರಕಾರಗಳು ಮತ್ತು ಸಾಂಸ್ಕೃತಿಕ ಆಚರಣೆಗಳ ಮೇಲೆ ಆಳವಾದ ಪರಿಣಾಮ ಬೀರಿದೆ. ಧರ್ಮವು ಕವಿಗಳನ್ನು ಪ್ರೇರೇಪಿಸುವುದರ ಜೊತೆಗೆ ಸಾಮಾಜಿಕ ಜಾಗೃತಿಯನ್ನು ಉತ್ತೇಜಿಸುವಲ್ಲಿ ಮತ್ತು ಕರ್ನಾಟಕದ ಸಾಂಸ್ಕೃತಿಕ ಪರಂಪರೆಯನ್ನು ಸಂರಕ್ಷಿಸುವುದೂ ಸೇರಿದಂತೆ ಚರಿತ್ರೆಯ ಮೇಲೆ ಆಯಾಯ ಕಾಲಘಟ್ಟದಲ್ಲಿ ಪ್ರಬಲವಾಗಿದ್ದ ಮತಧರ್ಮಗಳು ಅಂದಂದಿನ ಸಾಹಿತ್ಯಕ್ಕೆ ಮುಖ್ಯ ಪ್ರೇರಣೆಗಳಾಗಿದ್ದವು. ಆದರೆ ಇದೇ 'ಇದಮಿತ್ತಂ' ಎಂದು ಹೇಳಲು ಸಾಧ್ಯವಿಲ್ಲ. ಮುಖ್ಯವಾಗಿ ಜೈನ ಸಾಹಿತ್ಯ, ವೀರಶೈವ ಸಾಹಿತ್ಯ ಮತ್ತು ವೈಷ್ಣವ ಸಾಹಿತ್ಯದ ಪ್ರಭಾವವನ್ನು ನಾವು ಗಮನಿಸ ಬಹುದಾಗಿದೆ. ಈ ಎಲ್ಲಾ ಧರ್ಮಗಳು ಕಾಲಘಟ್ಟದುದ್ದಕ್ಕೂ ಪ್ರವಹಿಸುತ್ತಾ ಬಂದಿದ್ದು, ಕೆಲವು ತೀರ ಪ್ರಮುಖವಾಗಿ ಅನಂತರ ಕೆಲವು ಅಪ್ರಧಾನವಾಗಿ ಸಾಹಿತ್ಯದ ಮೇಲೆ ಪ್ರಭಾವ ಬೀರಿವೆ.*

***Keywords:*** *ಕನ್ನಡ ಸಾಹಿತ್ಯ, ಜೈನ ಸಾಹಿತ್ಯ, ವಚನ ಸಾಹಿತ್ಯ, ಧಾರ್ಮಿಕ ಪ್ರಭಾವ*

## ಪೀಠಿಕೆ

ಸನಾತನ ಭಾರತದಲ್ಲಿ ಧರ್ಮವು ಪ್ರಮುಖವಾದ ಪಾತ್ರವನ್ನು ವಹಿಸುತ್ತಿದ್ದು ಇದು ಎಲ್ಲಾ ಕಾವ್ಯ ಕಲೆಗಳ ಮೂಲ ಸ್ಫೂರ್ತಿಯಾಗಿ ಪ್ರವಹಿಸಿದೆ. ಕನ್ನಡ ಸಾಹಿತ್ಯದ ಮೊದಲ ಗ್ರಂಥ ಕವಿರಾಜಮಾರ್ಗದಲ್ಲಿ 'ಕಸವರಮೆಂಬುದು ನೆರೆ ಸೈರಿಸಲಾರ್ಪೊಡೆ ಪರ ವಿಚಾರಮುಮಂ ಪರಧರ್ಮಮಂ' ಎಂಬ ಮಾತಿದ್ದು, ಈ ಮಾತಿನ ಅರ್ಥ 'ನಿಜವಾದ ಐಶ್ವರ್ಯವೆಂದರೆ ಪರ ವಿಚಾರಗಳನ್ನು, ಪರ ಧರ್ಮಗಳನ್ನು ಸಹಿಸುವುದೇ ನಿಜವಾದ ಸಂಪತ್ತು ಎಂದರ್ಥ. ಈ ಮಾತು ಕನ್ನಡ ನಾಡು ಧರ್ಮಗಳ ವಿಚಾರದಲ್ಲಿ ಉದ್ದಕ್ಕೂ ತಾಳಿದ ನಿಲುವಿಗೆ ಒಂದು ವ್ಯಾಖ್ಯಾನದಂತಿದೆ. ಕರ್ನಾಟಕ ಸಂಸ್ಕೃತಿಯ ವೈಶಿಷ್ಟ್ಯವೆಂದರೆ ಅದರ ಧರ್ಮ ಸಹಿಷ್ಣುತೆಯೇ ಆಗಿದೆ. ಆದುದರಿಂದಲೇ ಕರ್ನಾಟಕದಲ್ಲಿ ಪ್ರವರ್ಧಮಾನವಾಗಿದ್ದ ಮುಖ್ಯ ಧರ್ಮಗಳು, ಇಲ್ಲಿನ ಸಾಹಿತ್ಯ ಹಾಗು ಕಲೆಗಳ ಬೆಳವಣಿಗೆಗೆ ಕಾರಣವಾಗಿವೆ.

ಅತ್ಯಂತ ಪ್ರಾಚೀನ ಧಾರ್ಮಿಕ ಸಾಹಿತ್ಯದ ಸುಳಿವು ಈಜಿಪ್ಟಿನ ಸಮಾಧಿಗಳಾದ ಪಿರಮಿಡ್‌ಗಳಲ್ಲಿ ದೊರಕುತ್ತವೆ. ಕ್ರಿ.ಪೂ. 2600 ವರ್ಷಗಳ ಹಿಂದೆ ರಚಿತವಾದ ಇವುಗಳ ಒಳಗೋಡೆ, ಶವದ ಪೆಟ್ಟಿಗೆಗಳ ಮುಚ್ಚಳ ಮತ್ತು ಬದಿಗಳಲ್ಲಿ ಪ್ರಾರ್ಥನಾ ಶ್ಲೋಕಗಳನ್ನು ಕೆತ್ತಿರುವುದು ಕಂಡು ಬರುತ್ತದೆ. ಹಿಂದೂಗಳಿಗೆ ಅತ್ಯಂತ ಪವಿತ್ರವೂ, ಪ್ರಾಚೀನವೂ

***Please cite this article as:*** ಶ್ರೀನಿವಾಸ, ಟಿ. (2025). ಕನ್ನಡ ಸಾಹಿತ್ಯದ ಮೇಲೆ ಧಾರ್ಮಿಕ ಪ್ರೇರಣೆಗಳು. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್,* 4(5), 7–9

ಆದ ವೇದಗಳು ಜಗತ್ತಿನ ಮೊಟ್ಟ ಮೊದಲ ಧಾರ್ಮಿಕ ಸಾಹಿತ್ಯ ಸಂಕಲನ ಎನ್ನಬಹುದು. ಪ್ರಾಚೀನ ಭಾರತದ ಜನರ ಧಾರ್ಮಿಕ ನಂಬಿಕೆಗಳ ಮೇಲೆ ಬೆಳಕು ಚೆಲ್ಲುವ ವೇದಗಳು ಪ್ರಪಂಚದ ಧಾರ್ಮಿಕ ಸಾಹಿತ್ಯದಲ್ಲಿ ಮಹತ್ವದ ಸ್ಥಾನಗಳಿಸಿವೆ.

ಇವಲ್ಲದೆ ಕರ್ನಾಟಕದಲ್ಲಿ ಬೌದ್ಧ ಧರ್ಮವು ಇದ್ದುದರಿಂದ ಕನ್ನಡದಲ್ಲಿ ಬೌದ್ಧ ಸಾಹಿತ್ಯದ ಪ್ರಭಾವವು ಕ್ರಿ.ಪೂ. 3ನೇ ಶತಮಾನದಿಂದ ಸುಮಾರು 12ನೇ ಶತಮಾನದವರೆಗೆ ಇದ್ದಿರಬೇಕೆಂದು ಪ್ರೊ.ಟಿ.ಎಸ್.ವೆಂಕಣ್ಣಯ್ಯ ಅಭಿಪ್ರಾಯ ಪಡುತ್ತಾರೆ. ಬೌದ್ಧರ ಧರ್ಮ ಗ್ರಂಥಗಳಾದ ತ್ರಿಪಿಟಕಗಳು, ಬೌದ್ಧರ ಧಾರ್ಮಿಕ ಸಾಹಿತ್ಯದಲ್ಲಿ ಪ್ರಧಾನವಾದವು. ಅಶೋಕ ಚಕ್ರವರ್ತಿ ಮತಪ್ರಚಾರಕ್ಕಾಗಿ ಧರ್ಮ ಬೋಧಕರನ್ನು ಕರ್ನಾಟಕದ ಬನವಾಸಿ ಮತ್ತು ಮಹಿಷ ಮಂಡಲಗಳಿಗೆ ಕಳಿಸಿ ಕೊಟ್ಟ ಉಲ್ಲೇಖಗಳಿವೆ, ಜೊತೆಗೆ ಬನವಾಸಿ, ಬಳ್ಳಿಗಾವೆ, ಕೋಳಿವಾಡಗಳಲ್ಲಿ ದೊರೆತಿರುವ ಬೌದ್ಧ ಸ್ಮಾರಕಗಳು ಮತ್ತಿತರ ಸಾಕ್ಷ್ಯಗಳಿಂದ ಕರ್ನಾಟಕದಲ್ಲಿ ಬಹುಕಾಲ ಬೌದ್ಧ ಧರ್ಮವಿತ್ತೆಂಬುದು ನಿರ್ವಿವಾದವಾದ ಸಂಗತಿಯಾಗಿದೆ. ಆದರೆ ಇವರು ಕನ್ನಡದಲ್ಲಿ ಬೌದ್ಧ ಸಾಹಿತ್ಯ ನಿರ್ಮಾಣ ಮಾಡಿದ್ದರೆಂಬುದಕ್ಕೆ ಮಾತ್ರ ಯಾವುದೇ ಆಧಾರವಿಲ್ಲ. ಜೊತೆಗೆ 5ನೇ ಶತಮಾನದ ಹೊತ್ತಿಗೆ ಪ್ರಬಲವಾಗುತ್ತಿದ್ದ ಜೈನ ಧರ್ಮದೊಂದಿಗೆ ಹೋರಾಟದಲ್ಲಿ ತೊಡಗಿದ ಬೌದ್ಧ ಧರ್ಮವು ಮುಂದೆ ಶೈವ–ವೈಷ್ಣವ ಧರ್ಮಗಳ ಪ್ರಭಾವದಿಂದಾಗಿ 13–14 ನೇ ಶತಮಾನದ ಹೊತ್ತಿಗೆ ಕರ್ನಾಟಕದಲ್ಲಿ ಹೇಳ ಹೆಸರಿಲ್ಲದಂತಾಯಿತು.

ಆಧುನಿಕ ಕಾಲವನ್ನು ಹೊರತುಪಡಿಸಿ ನೋಡಿದರೆ ಉದ್ದಕ್ಕೂ ಜೈನ, ವೀರಶೈವ, ವೈಷ್ಣವ ಧರ್ಮಗಳು ಕನ್ನಡ ಸಾಹಿತ್ಯದ ಪ್ರೇರಕ ಶಕ್ತಿಗಳಾಗಿವೆ. ಕನ್ನಡ ಸಾಹಿತ್ಯದ ಮಟ್ಟಿಗೆ ಜೈನರೇ ಸಾಹಿತ್ಯದಲ್ಲಿ ಸಮೃದ್ಧಿಯನ್ನು ತಂದ ಮೊದಲಿಗರೆನ್ನಬಹುದು. ಏಕೆಂದರೆ ಅನೇಕ ರಾಜವಂಶಗಳ ಆಶ್ರಯದಲ್ಲಿ ಜೈನ ಕವಿಗಳು ಉತ್ತಮ ಕಾವ್ಯಗಳನ್ನು ಪ್ರೌಢವಾದ ಹಳಗನ್ನಡ ಶೈಲಿಯಲ್ಲಿ ಚಂಪೂ ಗ್ರಂಥಗಳನ್ನು ರಚಿಸಿದ್ದರು. ಜೈನ ಕವಿಗಳು ವೀರಶೈವ ಕವಿಗಳ ಪ್ರಾಬಲ್ಯಕ್ಕೆ ಒಳಪಟ್ಟು ಅವರ ಭಾಷೆಯನ್ನು ಕಾವ್ಯರೂಪವನ್ನು, ಸಾಹಿತ್ಯ ಲಕ್ಷಣವನ್ನು ಸ್ವೀಕರಿಸಿದರು. ಹಾಗೆಯೆ ಸಂಸ್ಕೃತ ಛಂಧಸ್ಸಿನ ಚಂಪೂ ಗ್ರಂಥಗಳ ಪ್ರಾಧಾನ್ಯತೆ ತಗ್ಗಿ ದೇಶ್ಯ ವೃತ್ತಗಳು ಮತ್ತು ಹಾಡುಹಬ್ಬಗಳ ಮೂಲಕ 12ನೇ ಶತಮಾನದಲ್ಲಿ ವೀರಶೈವ ಸಾಹಿತ್ಯದ ಉದಯವಾಯಿತು. ಲಿಂಗಾಯಿತ ಕವಿಗಳು ತಮ್ಮ ಕೃತಿಗಳ ಮೂಲಕ ಶಿವಭಕ್ತಿ ಮತ್ತು ಸಾಮಾಜಿಕ ಸಮಾನತೆಗಳ ತತ್ವಗಳನ್ನು ಪ್ರಸಾರ ಮಾಡಿದರು. ವಚನ ಸಾಹಿತ್ಯ ಲಿಂಗಾಯಿತ ಧರ್ಮದ ಪ್ರಮುಖ ಸಾಹಿತ್ಯ ರೂಪವಾಗಿದೆ. ಇದು ಸರಳ ಮತ್ತು ಜನಪ್ರಿಯ ಶೈಲಿಯಲ್ಲಿ ರಚಿಸಲ್ಪಟ್ಟಿದೆ. ಬಸವಣ್ಣ, ಅಕ್ಕಮಹಾದೇವಿ, ಅಲ್ಲಮನಂತಹ ವಚನಕಾರರು ತಮ್ಮ ಕೃತಿಗಳ ಮೂಲಕ ಸಮಾಜದ ವಿವಿಧ ಅಂಶಗಳನ್ನು ಪರಿಚಯಿಸಿದರು. ಇದರ ಜೊತೆಗೆ 15ನೇ ಶತಮಾನದ ನಂತರ ಕನ್ನಡ ಸಾಹಿತ್ಯದಲ್ಲಿ ಭಕ್ತಿ ಚಿಂತನೆಗಳನ್ನು ತರುತ್ತಾ, ಕನ್ನಡ ಸಾಹಿತ್ಯದ ಮೇಲೆ ಹೊಸ ಪ್ರಭಾವವನ್ನು ಬೀರಿತು. ಪುರಂದರದಾಸ, ಕನಕದಾಸ ಮುಂತಾದವರು ಕೀರ್ತನೆಗಳನ್ನು ರಚಿಸಿ ವೇದಾಂತ ಮತ್ತು ಭಕ್ತಿತತ್ವಗಳನ್ನು ಜನಸಾಮಾನ್ಯರಿಗೆ ತಲುಪಿಸಿದರು. ಇವರ ಕೃತಿಗಳು ಸರಳ ಭಾಷೆಯಲ್ಲಿದ್ದು ಸಂಗೀತಾತ್ಮಕ ಶೈಲಿಯಲ್ಲಿ ರಚಿಸಲ್ಪಟ್ಟಿದ್ದು ಜನರ ಹೃದಯಗಳನ್ನು ಗೆದ್ದವು. ಹೀಗೆ 15 ನೇ ಶತಮಾನದಲ್ಲಿ ವೈಷ್ಣವ ಸಾಹಿತ್ಯ ವೈದಿಕ ಮತಾನುಸಾರಿಯಾಗಿ ವೇದಾಂತ, ಇತಿಹಾಸ, ಪುರಾಣಗಳನ್ನು ಪ್ರತಿಪಾದಿಸಿತು.

ಹೀಗೆ ಹಳಗನ್ನಡ ಸಾಹಿತ್ಯ ಧರ್ಮ, ತತ್ವ–ನೀತಿ ಪ್ರಚಾರವನ್ನೆ ಮುಖ್ಯ ವಸ್ತುಗಳನ್ನಾಗಿ ಮಾಡಿಕೊಂಡು ಕೃತಿಗಳನ್ನು ರಚಿಸಿತು. ಇದರಿಂದಾಗಿ ಸಾಹಿತ್ಯವೆಂದೂ ಸಾಹಿತ್ಯದ ಉದ್ದೇಶದಿಂದಲೇ ರಚನೆಯಾದದ್ದು ವಿರಳ. ಸಾಹಿತ್ಯವು ಜನರಲ್ಲಿರುವ ನೈತಿಕ ಪ್ರಜ್ಞೆ ಮತ್ತು ಪುರುಷಾರ್ಥ ಪ್ರಾಪ್ತಿಗೋಸ್ಕರ ರಚಿತವಾಗಬೇಕು

ಎನ್ನುವ ಕಾಲಘಟ್ಟದಲ್ಲಿ ಧರ್ಮವೊಂದೇ ಕವಿಗಳ ಕಾವ್ಯದ ವಸ್ತುವಾದದ್ದು ಆಶ್ಚರ್ಯವೇನಲ್ಲ. ಹೀಗಾಗಿಯೇ ಶಬ್ದಮಣಿದರ್ಪಣವೆಂಬ ವ್ಯಾಕರಣ ಗ್ರಂಥ ಬರೆದ ಕೇಶಿರಾಜ ತನ್ನ ವ್ಯಾಕರಣ ಗ್ರಂಥವನ್ನು ಓದುವವರಿಗೆ "ಆಕಾಂಕ್ಷಿಪ ಮುಕ್ತಿಯಕ್ಕುಂ" ಎಂದು ಹೇಳಿದ್ದಾನೆ. ಕಾವ್ಯದ ಉದ್ದೇಶವೇ, ಧರ್ಮದ ಉದ್ದೇಶವೂ ಆದಾಗ ಸಾಹಿತ್ಯ ಎನ್ನುವುದು ಧರ್ಮ ಪ್ರಸಾರದ ಹಾಗು ಧರ್ಮ ಪ್ರಚಾರದ ಮಾಧ್ಯಮವಾಯಿತು. 9ನೇ ಶತಮಾನದಲ್ಲಿ ಜೈನರು ತಮ್ಮ ಧರ್ಮ ನೀತಿಗಳಿಗೆ ಸಂಬಂಧಪಟ್ಟ ವಿಷಯಗಳನ್ನು, ಪುರಾಣ ಕಥೆಗಳನ್ನು ಕನ್ನಡದಲ್ಲಿ ತಿಳಿಸಿದರು, ಹಾಗಾಗಿ ಕನ್ನಡ ಒಂದು ಪ್ರೌಢ ಮಾರ್ಗದಲ್ಲಿ ನಡೆಯಿತು. ಹಾಗೆ ಕನ್ನಡವನ್ನು ಎತ್ತಿ ಹಿಡಿದ ಜೈನ ಕವಿಗಳಲ್ಲಿ ಒಬ್ಬ ಕಾಳಿದಾಸನಿಗೆ ನಾನೇನು ಕಡಿಮೆ ಇಲ್ಲ ಎಂದು ಹೇಳಿಕೊಳ್ಳುತ್ತಾನೆ. ಅಷ್ಟರ ಮಟ್ಟಿಗೆ ನಮ್ಮ ಕವಿಗಳಿಗೆ ಧೈರ್ಯವಿತ್ತು. ಸಂಸ್ಕೃತ ಸಾಹಿತ್ಯದ ಸಾರವನ್ನು ಹೀರಿ ಅದನ್ನು ಮೀರಿ ಕೆಲಸ ಮಾಡಿದ್ದೇವೆಂಬ ಹೆಮ್ಮೆ ಅವರಿಗಿತ್ತು. ಹೀಗೆ ಬರೆಯಲು ತೊಡಗಿದ ಸಾಹಿತ್ಯದಲ್ಲಿ ಅವರು ಒಂದು ಕ್ರಮವನ್ನು, ರೀತಿಯನ್ನು, ಮಾರ್ಗವನ್ನು ಹಿಡಿದರು. ಇದರಿಂದ ಕವಿರಾಜಮಾರ್ಗವೊಂದು ಹುಟ್ಟಿತು. ಕವಿರಾಜಮಾರ್ಗ ಎಲ್ಲಾ ಕವಿಗಳ ರಾಜಮಾರ್ಗವಾಯಿತು. ಇದರ ಜೊತೆಗೆ ಕವಿಗಳು ತಮ್ಮ ಕೃತಿ ರಚನೆಯ ಸಂದರ್ಭದಲ್ಲಿ ಅವರವರ ಮತವನ್ನು ಹೇಳಿಕೊಂಡಿದ್ದಾರೆ. ಹಾಗಾಗಿ ಯಾವ ಕವಿಯು ತಾನು ಒಪ್ಪಿಕೊಂಡ ಮತಧರ್ಮಗಳ ಪ್ರಭಾವದಿಂದ ಹೊರಗೆ ನಿಲ್ಲಲು ಸಾಧ್ಯವಾಗದೆ ಅಂದಂದಿನ ಮತಧರ್ಮಗಳಿಗೆ ಬದ್ಧರಾಗಿದ್ದರು. ಪಂಪನಂತಹ ಮಹಾ ಕವಿಗಳು ತಮ್ಮ ಕೃತಿಗಳ ಮೂಲಕ ಜೈನಧರ್ಮದ ತತ್ವಗಳನ್ನು ಪ್ರಸಾರ ಮಾಡಿದ್ದೂ ಅಲ್ಲದೆ, ಧಾರ್ಮಿಕ ಉದ್ದೇಶಕ್ಕೆ ಹೊರತಾದ ಕಾವ್ಯಗಳನ್ನು ಬರೆದಿದ್ದು ಉಂಟು. ಉದಾಹರಣೆಗೆ ಆದಿಪುರಾಣವೆಂಬ ಜೈನ ಕೃತಿಯ ಜೊತೆಗೆ 'ವಿಕ್ರಮಾರ್ಜುನ ವಿಜಯ'ವೆಂಬ ಲೌಕಿಕ ಕೃತಿಯನ್ನು ಬರೆದಿದ್ದಾನೆ.

ಜಗತ್ತಿನ ಎಲ್ಲಾ ಸಾಹಿತ್ಯಗಳ ಮೇಲೂ ಒಂದಲ್ಲಾ ಒಂದು ರೀತಿಯ ಧಾರ್ಮಿಕ ಪ್ರೇರಣೆ ಇದ್ದೇ ಇರುತ್ತದೆ. ಒಂದು ಧರ್ಮದ ತತ್ವಗಳು ಮತ್ತು ಆಚರಣೆಗಳು ಆಯಾ ಕಾಲಘಟ್ಟದ ಸಾಹಿತ್ಯದ ಮೇಲೆ ಪ್ರಭಾವ ಬೀರಿರುವುದನ್ನು ನಾವು ಕಾಣಬಹುದಾಗಿದೆ.

**ಪರಾಮರ್ಶನ ಗ್ರಂಥಗಳು:**


- ನಾಗಭೂಷಣ, ಸಿ. – *ಕನ್ನಡ ಸಾಹಿತ್ಯ ಸಂಸ್ಕೃತಿ ಅಸ್ಮಿತೆ.*
- ರಾಜಪ್ಪ ದಳವಾಯಿ, (ಸಂ.) – *ಕನ್ನಡ ಸಾಹಿತ್ಯ ಚರಿತ್ರೆ*
- ಶೇಷಗಿರಿರಾವ್, ಎಲ್. ಎಸ್. – *ಹೊಸಗನ್ನಡ ಸಾಹಿತ್ಯ ಚರಿತ್ರೆ.* ಅಂಕಿತ ಪುಸ್ತಕ